

**◆ ಹಲವು ತಲೆಮಾರುಗಳಿಂದ ನಿಮ್ಮ ಕುಟುಂಬ ಸಾರಂಗಿಯೊಂದಿಗೆ ಅವಿನಾಭಾವ ಸಂಬಂಧ ಇಟ್ಟುಕೊಂಡಿದೆ. ಈ ನಂಟು ಎಷ್ಟು ತಲೆಮಾರುಗಳದು?**

ನನ್ನ ಮಕ್ಕಳನ್ನು ಲೆಕ್ಕಕ್ಕೆ ತೆಗೆದುಕೊಂಡರೆ ಒಂಬತ್ತನೇ ತಲೆಮಾರು. ಮೂಲತಃ ನಮ್ಮ ಕುಟುಂಬ ಉತ್ತರಪ್ರದೇಶ ಸಮೀಪದ ಕಿರಣಾ ಎಂಬಲ್ಲಿತ್ತು. ತಾತ ಮುತ್ತಾತಂದಿರು ಗಾಯಕರೂ ಹೌದು. ನಮ್ಮ ತಾತ ಶೇಖ್ ಅಬ್ದುಲ್ ಖಾನ್ ಹಿರಿಯ ಗಾಯಕರಾಗಿದ್ದ ಉಸ್ತಾದ್ ಕರೀಂಖಾನ್ ಅವರ ಗಾಯನಕ್ಕೆ ಸಾರಂಗಿ ಸಾಥಿ ನೀಡಲು ಮೈಸೂರಿಗೆ ಬರುತ್ತಿದ್ದರು. ಮುಂದೆ ಮೈಸೂರು ಮಹಾರಾಜರ ಕಾಲದಲ್ಲಿ ಆಸ್ಥಾನ ವಿದ್ವಾಂಸರಾಗಿಯೂ ಇದ್ದರು. ಸ್ವಾತಂತ್ರ್ಯ ಪೂರ್ವದಲ್ಲಿ ಹೈದರಾಬಾದ್ ನವಾಬರ ಆಸ್ಥಾನದಲ್ಲೂ ಸಂಗೀತಗಾರರಾಗಿದ್ದವರು. ಅದಾಗಿ 1950ರಲ್ಲಿ ನಮ್ಮ ತಂದೆ ಉಸ್ತಾದ್ ಅಬ್ದುಲ್ ಖಾದಿರ್ ಖಾನ್ ಮಧ್ಯಪ್ರದೇಶದ ಗ್ವಾಲಿಯರ್‌ನಲ್ಲಿ ಬಂದು ನೆಲೆಸಿದರು. ಅಲ್ಲಿಂದ ಮುಂದೆ ಧಾರವಾಡ ಆಕಾಶವಾಣಿಯಲ್ಲಿ ನಿಲಯ ಕಲಾವಿದರಾದರು. ಆಗ ಸಂಗೀತ ದಿಗ್ಗಜರಾದ ಪಂ. ಮಲ್ಲಿಕಾರ್ಜುನ ಮನ್ಸೂರ್, ಗಂಗೂಬಾಯಿ ಹಾನಗಲ್, ಕುಮಾರ್ ಗಂಧರ್ವ, ಭೀಮಸೇನ ಜೋಶಿ ಮುಂತಾದವರ ಗಾಯನಕ್ಕೆ ಸಾರಂಗಿ ಸಾಥಿ ನೀಡುತ್ತಿದ್ದರು. ಆಗ ಹಾರ್ಮೋನಿಯಂ ಇರಲಿಲ್ಲ. ಸಾರಂಗಿಯೇ ಗಾಯನಕ್ಕೆ ಪ್ರಮುಖ ವಾದ್ಯ ಸಾಥಿಯಾಗಿತ್ತು. ಹೀಗೆ ಒಂಬತ್ತು ತಲೆಮಾರುಗಳಿಂದ ಸಾರಂಗಿ ನಮ್ಮ ಮನೆತನದಲ್ಲಿಯೇ ಉಳಿದಿದೆ.

**◆ ಸಾರಂಗಿ ವಾದನ ನಿಮ್ಮ ಮನೆತನಕ್ಕೆ ಮಾತ್ರ ಸೀಮಿತವಾದದ್ದು ಏಕೆ?**

ಬಹಳ ಹಿಂದಿನ ಕಾಲಘಟ್ಟವನ್ನು ಗಮನಿಸಿದರೆ ಸಂಗೀತ ಕೇವಲ 'ಮನೆತನ' (ಘರಾಣ)ಗಳಿಗೆ ಸೀಮಿತವಾಗಿತ್ತು. ಸಂಗೀತ ವೃತ್ತಿ ಎಂದರೆ ಅದೊಂದು ಉದ್ಯೋಗವೇ ಅಲ್ಲ ಎಂಬ ಪರಿಸ್ಥಿತಿ ಇತ್ತು. ಈ ಕಾಲದಲ್ಲಿ ನಮ್ಮ ಪೂರ್ವಜರು ಸಾರಂಗಿಯನ್ನು ಕರ್ನಾಟಕಕ್ಕೆ ತಂದರು. ನವಾಬರ ಕಾಲದಲ್ಲಿ ಸಾರಂಗಿಯಲ್ಲಿ ಮತ್ತಷ್ಟು ಪ್ರಯೋಗಗಳು ನಡೆದವು. ಕಿರಾಣಾ ಘರಾಣೆಯಿಂದ ಬಂದ ನಮ್ಮ ಕುಟುಂಬ ಕರ್ನಾಟಕದಲ್ಲಿ ಸಾರಂಗಿ ನುಡಿಸುವ ಏಕೈಕ ಕುಟುಂಬವಾಗಿ ಉಳಿಯಿತು. ನಾನು ಆರು ವರ್ಷದ ಬಾಲಕನಿದ್ದಾಗಲೇ ಸಾರಂಗಿ ಕಲಿಯಲಾರಂಭಿಸಿದೆ. ತಂದೆಯವರೇ ಗುರುಗಳು. ಬಳಿಕ ಮುಂಬೈಯಲ್ಲಿರುವ

## ಸಾರಂಗಿ ಸ್ವರೂಪ

ಸಾರಂಗಿಯನ್ನು 'ಚುನ್' ಎಂಬ ಮರದಿಂದ ಮಾಡಲಾಗುತ್ತದೆ. ಒಂದೇ ಮರ ಬಳಸಿ ಮಾಡುವುದು. ಮೇಲ್ಭಾಗವನ್ನು ಆಡಿನ ಚರ್ಮದಿಂದ ಮುಚ್ಚಲಾಗುತ್ತದೆ. ವಾದ್ಯದ ಪ್ರಮುಖ ಮೂರು ತಂತಿಗಳಿಗೆ ಆಡಿನ ಕರುಳಿನ ಸಂಸ್ಕರಿತ ಭಾಗವನ್ನು ಸೇರಿಸುತ್ತಾರೆ. ಉಳಿದ ತಂತಿಯನ್ನು ಸ್ಟೀಲ್‌ನಿಂದ ಮಾಡಲಾಗುತ್ತದೆ. ನುಡಿಸಾಣಿಕೆಗೆ ಕಮಾನು ಬಳಸಲಾಗುತ್ತದೆ. ಉಗುರಿನಿಂದ ತಂತಿಯನ್ನು ಮೀಟುವುದು. ಈ ವಾದ್ಯ ಎಲ್ಲ ಕಡೆ ಸಿಗುವುದಿಲ್ಲ. ಮೀರತ್, ಮುರಾದಾಬಾದ್‌ಗಳಲ್ಲಿ ಉತ್ತಮ ಗುಣಮಟ್ಟದ ಸಾರಂಗಿ ಸಿಗುತ್ತದೆ.